**ಅ.ದಾ. ಸಂಖ್ಯೆ: 250/2020**
**ಪಿ.ಡಬ್ಲ್ಯೂ -01**

**ದಿನಾಂಕಃ 15.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು :- ಪ್ರತಿವಾದಿಯ ಪರ ಶ್ರೀ. ಕೆ ಆರ್ ಸಿ. ವಕೀಲರಿಂದ :-**

ದಾವಾಸ್ವತು ನಿಮಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿ ನನ್ನ ತಾತನವರ ಸ್ವತ್ತು ಎಂದು ನುಡಿಯುತ್ತಾರೆ. ಕಾಳಗುಡ್ಡಯ್ಯ ಎಂದರೆ ಯಾರು ಎಂದರೆ ಸಾಕ್ಷಿ ನನ್ನ ತಾತ ಎಂದು ನುಡಿಯುತ್ತಾರೆ. ರಾಮಯ್ಯ ಏನು ಆಗಬೇಕು ಎಂದರೆ ಸಾಕ್ಷಿ ತಂದೆ ಎಂದು ನುಡಿಯುತ್ತಾರೆ. ಸದರಿ ಕಾಳಗುಡ್ಡಯ್ಯ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ 6 ಜನ ಎಂದು ನುಡಿಯುತ್ತಾರೆ. ಸದರಿಯವರ ಹೆಸರು ಕೆಂಪಣ್ಣ , ಕೆಂಪದಾಸಯ್ಯ , ರಾಮಯ್ಯ , ಶಿವಣ್ಣ , ದೇವಮ್ಮ , ಜಯಮ್ಮ ಎಂದು ನುಡಿಯುತ್ತಾರೆ. ಸದರಿ 6 ಜನ ಮಕ್ಕಳಲ್ಲಿ ಶಿವಣ್ಣ ಮತ್ತು ದೇವಮ್ಮ ಈಗ ಜೀವಂತ ಇರುತ್ತಾರೆ.

ನಿಮ್ಮ ವಾದಪತ್ರದಲ್ಲಿ ನಿಮ್ಮ ತಾತ ಕಾಳಗುಡ್ಡಯ್ಯ ಮರಣ ನಂತರ ಅವರ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ಹೇಳಿದ್ದು ಸದರಿ ವಿಭಾಗಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಯಾರ ಯಾರ ಮಧ್ಯೆ ವಿಭಾಗ ಆಗಿತ್ತು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ಯಾವ ಸರ್ವೆ ನಂಬರ್ ಗಳಿಗೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಭಾಗಕ್ಕೆ ಬಂದ ಸರ್ವೆ ನಂಬರ್ ಗಳು ಮಾತ್ರ ಗೊತ್ತಿದ್ದು ಬೇರೆಯವರ ಭಾಗಕ್ಕೆ ಹೋದ ಸರ್ವೆ ನಂಬರ್ ಗಳು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಭಾಗಪತ್ರವನ್ನು ನೀವು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿರುವುದಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಮ್ಮ ತಂದೆ ರಾಮಯ್ಯ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ ಇಬ್ಬರು ಎಂದು ನುಡಿಯುತ್ತಾರೆ. ಸದರಿಯವರು ಭಾಗ್ಯಮ್ಮ ಮತ್ತು ನಾನು ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರ ಹೆಸರಿಗೆ ಆದಂತಹ ದಾಖಲೆಗಳನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು

ನುಡಿಯುತ್ತಾರೆ. ದಾವಾಸ್ವತ್ತಿಲ್ಲಿ ನಿಮಗಾಗಲಿ ನಿಮ್ಮ ಪೂರ್ವಜರಿಗಾಗಲಿ ಯಾವುದೇ ಹಕ್ಕು ಇರುವುದಿಲ್ಲ ಹಾಗೂ ದಾವಾಸ್ವತ್ತಿನಲ್ಲಿ ನೀವು ಸ್ವಾಧೀನ ಇರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಕಂದಾಯ ದಾಖಲೆಗಳನ್ನು ನೀವು ಇತ್ತೀಚೆಗೆ ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ದಾವೆ ಸಲ್ಲಿಸಲು ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ವಂಶವೃಕ್ಷವನ್ನು ಸೃಷ್ಟಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಕಾಳಗುಡ್ಡಯ್ಯ ಮತ್ತು ನಿಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿ ಸದರಿ ಕಾಳಗುಡ್ಡಯ್ಯ ನಮ್ಮ ತಾತ ಎಂದು ನುಡಿಯುತ್ತಾರೆ.

ಪ್ರತಿವಾದಿ ಸಲ್ಲಿಸಿರುವ ಪ್ರತಿವಾದಪತ್ರವನ್ನು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-3ರ ಪಹಣಿ ಪತ್ರಿಕೆಯಲ್ಲಿ ಇರುವ ಕಾಳಗುಡ್ಡಯ್ಯ ಬಿನ್ ಕೆಂಪದಾಸಯ್ಯ ಯಾರು ಎಂದರೆ ಸಾಕ್ಷಿ ನನ್ನ ತಾತ ಎಂದು ನುಡಿಯುತ್ತಾರೆ. ನಿಪಿ-4ರ ಪಹಣಿ ಪತ್ರಿಕೆಯಲ್ಲಿ ಇರುವ ಕೆಂಪಯ್ಯ ಪೌತಿ ಮಗ ಗಂಗಯ್ಯ ಎಂಬುವವರು ಯಾರು ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-6 ರ ಪಹಣಿ ಪತ್ರಿಕೆಯಲ್ಲಿ ಇರುವ ಕಾಳಗುಡ್ಡಯ್ಯ ಬಿನ್ ಹೊನ್ನಪ್ಪ ಎಂಬುವವರು ಯಾರು ಎಂದರೆ ಸಾಕ್ಷಿ ಕಾಳಗುಡ್ಡಯ್ಯ ನನ್ನ ತಾತ ಆದರೆ ಹೊನ್ನಪ್ಪ ಎಂದು ತಪ್ಪಾಗಿ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹೊನ್ನಪ್ಪ ಎಂಬುವವರು ನಿಮಗೆ ಸಂಬಂಧ ಇರುವುದಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಪಹಣಿಯಲ್ಲಿ ಕಾಳಗುಡ್ಡಯ್ಯ ಬಿನ್ ಹೊನ್ನಪ್ಪ ಎಂದು ತಪ್ಪಾಗಿ ನಮೂದು ಆದ ಬಗ್ಗೆ ಸರಿ ಪಡಿಸಲು ಅರ್ಜಿ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಕಾಳಗುಡ್ಡಯ್ಯ ಎಂಬುವವರಿಗೂ ಹಾಗೂ ನಿಮಗೂ ಯಾವುದೇ ಸಂಬಂಧ ಇರುವುದಿಲ್ಲ , ಕಾಳಗುಡ್ಡಯ್ಯ ಬಿನ್ ಗುಡ್ಡಯ್ಯ ಮತ್ತು ಕಾಳಗುಡ್ಡಯ್ಯ ಬಿನ್ ಹೊನ್ನಪ್ಪ ಎಂದು ಇರುವುದನ್ನು ದುರುಪಯೋಗ ಪಡಿಸಿಕೊಂಡು ಹಾಗೂ ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸದರಿ ಕಾಳಗುಡ್ಡಯ್ಯ ನನ್ನ ತಾತ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾಸ್ವತ್ತು ನಿಮ್ಮ ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಪಹಣಿಯನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಪಹಣಿ ಹೊರತು ಪಡಿಸಿ ಬೇರೆ ದಾಖಲೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಹದ್ದುಬಸ್ತು ಮಾಡಿಸುವಾಗ ಪ್ರತಿವಾದಿಗೆ ನೋಟೀಸ್ ನೀಡಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪ್ರತಿವಾದಿಯ ಹೆಸರು ಎಲ್ಲಿಯೂ ಇರುವುದಿಲ್ಲ ಎಂದರೆ ಸಾಕ್ಷಿ ಅವರು ನೋಟೀಸನ್ನು ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಚೆಕ್ಕುಬಂಧಿ ಏನು ಎಂದರೆ ಸಾಕ್ಷಿ ಪೂರ್ವಕ್ಕೆ ಸರ್ವೆ ನಂ.46/3ಎ, ಪಶ್ಚಿಮಕ್ಕೆ ಸರ್ವೆ ನಂ.46/1 ಪಡ- ಉಳುಮೆ ಮಾಡುತ್ತಿರುವವರು ರಂಗಪ್ಪ , ಉತ್ತರಕ್ಕೆ ಸರ್ವೆ ನಂ .40 ಸರ್ಕಾರಿ ಗೋಮಾಳ ಅನುಭವ ಮೋಟಯ್ಯ ಹಾಗೂ ದಕ್ಷಿಣಕ್ಕೆ ಸರ್ವೆ ನಂ .45/2 ಎಂದು ನುಡಿಯುತ್ತಾರೆ. ನೀವು ನೀಡಿರುವಂತಹ ಹದ್ದುಬಸ್ತಿನಲ್ಲಿ ಪೂರ್ವಕ್ಕೆ ತಿಮ್ಮಣ್ಣ , ಪಶ್ಚಿಮಕ್ಕೆ ರಂಗಪ್ಪ ಮತ್ತು ಉತ್ತರಕ್ಕೆ ತಿಮ್ಮಣ್ಣ ಮತ್ತು ದಕ್ಷಿಣಕ್ಕೆ ಮೋಟಯ್ಯ ಎಂದು ಇದೆ ಎಂದರೆ ಸಾಕ್ಷಿ ಕಂಪ್ಯೂಟರ್ ನಲ್ಲಿ ಮಿಸ್ಟೇಕ್ ಆಗಿರುತ್ತದೆ ಎಂದು ನುಡಿಯುತ್ತಾರೆ. ಬಾಜುದಾರರ ತಂದೆಯವರ ಹೆಸರನ್ನು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಅವರ ತಂದೆಯ ಹೆಸರು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಾವೆಯಲ್ಲಿ ಕೊಟ್ಟಿರುವ ಚೆಕ್ಕುಬಂಧಿ ಸುಳ್ಳು ಇರುತ್ತದೆ ಎಂದರೆ ಸಾಕ್ಷಿ ಸರಿ ಇರುತ್ತದೆ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಪ್ರತಿವಾದಿಯ ಪರ ವಕೀಲರು ಮುಂದುವರಿದ ವಾಟೀ ಸವಾಲಿಗೆ ಸಮಯ ಕೋರಿದ್ದರಿಂದ ವಾಟೀ ಸವಾಲು ಮುಂದೂಡಲಾಯಿತು.**

ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.